**ಡಿ.ಡಬ್ಲ್ಯೂ-1**

**ದಿಃ 17-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ**

ನಿಡಿ 1 ರಲ್ಲಿ 20 ಗುಂಟೆ ಪೈಕಿ 9 ಗುಂಟೆ ಜಮೀನನ್ನು ನನ್ನ ಹೆಸರಿಗೆ ಖರೀದಿ ಕೊಡಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಉಳಿದ 11 ಗುಂಟೆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಬಹುದು ಎಂದು ಬರೆದಿದೆ ಎಂದರೆ ಸರಿ. ಸರ್ವೆ ನಂಬರ 132/1 ರಲ್ಲಿ 20 ಗುಂಟೆಗೆ ಸಬ್ ಡಿವಿಜನ ಆಗಿಲ್ಲ ಎಂದರೆ ಸರಿ. ಸರ್ವೆ ನಂಬರ 132/1 ರಲ್ಲಿ 2 ಎಕರೆ 39 ಗುಂಟೆ ಜಮೀನು ಜಂಟಿಯಾಗಿ ಇದೆ ಎಂದರೆ ಸರಿ. 20 ಗುಂಟೆ ಜಮೀನಿಗೆ ಚೆಕಬಂದಿ ಬರೆದಿಲ್ಲ ಎಂದರೆ ಸರಿ. ನಿಡಿ 1 ರಂತೆ ಉಳಿದ 11 ಗುಂಟೆ ಜಮೀನನ್ನು ಕ್ರಯ ಮಾಡಿಲ್ಲ ಎಂದರೆ ಸರಿ.

132/1 ರಲ್ಲಿ ವಾದಿಗೆ 30 ಗುಂಟೆ ಜಮೀನು ನನ್ನ ಪ್ರಕಾರ ಬರುತ್ತದೆ. 30 ಗುಂಟೆ ಜಮೀನಿನ ಬಗ್ಗೆ ಯಾವುದೇ ದಾಖಲೆ ಇಲ್ಲ. ವಾದಿಯು ನಿಡಿ 2 ರ ಪ್ರಕಾರ ತನ್ನ 20 ಗುಂಟೆ ಜಮೀನನ್ನು ನನ್ನ ಹೆಂಡತಿಗೆ ಬರೆದು ಕೊಟ್ಟಿದ್ದಾನೆ. 2007 ರಲ್ಲಿ ವಾದಿಯು ನನ್ನ ಹೆಂಡತಿಗೆ ಯಾವುದೇ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಸೇರಿ ನಿಡಿ 1 ರ ಆಧಾರದ ಮೇಲೆ ನಿಡಿ 7 ನ್ನು 20 ಗುಂಟೆ ಜಮೀನಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಡಿ 2 ರ ಚೆಕಬಂದಿ ಮತ್ತು ನಿಡಿ 7 ರ ಚೆಕಬಂದಿ ಒಂದೇ ಆಗಿದೆ ಎಂದರೆ ಉತ್ತರ ಭಾಗಕ್ಕೆ ವ್ಯತ್ಯಾಸ ಇದೆ ಎಂದು ಸಾಕ್ಷಿ ನುಡಿಯುತ್ತಾರೆ.

ನಿಡಿ 7 ರ ಮೂಲ ದಾಖಲೆ ನನ್ನ ಬಳಿ ಇದೆ. ನನಗೆ ನಿಡಿ 7 ರ ಮೂಲ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇದೆಯೊ ಇಲ್ಲವೊ ನನ್ನ ವಕೀಲರಿಗೆ ಗೊತ್ತು. ನಿಡಿ 2 ಮತ್ತು ನಿಡಿ 7 ರಲ್ಲಿ ಬರೆದಿರುವ ಆಸ್ತಿ ಒಂದೇ ಆಗಿರುತ್ತವೆ ಎಂದರೆ ಸರಿ. ನಿಡಿ 7 ನ್ನು ಬೇಕವಾಡ ಎನ್ನುವವರು ತಯಾರಿಸಿದ್ದಾರೆ. ದಿಃ 31.07.2013 ರಲ್ಲಿ ನಿಡಿ 7 ನ್ನು ಮಾಡಲಾಗಿದೆ. ನಿಡಿ 7 ರಲ್ಲಿ ವಾದಿಯ ಸಹಿ ಇಲ್ಲ. ನಿಡಿ 1 ಬೋಗಸ ದಾಖಲೆ ಆಧಾರದ ಮೇಲೆ ನಿಡಿ 2 ಮತ್ತು 7 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ನಿಡಿ 7 ರಲ್ಲಿ ಆಸ್ತಿಯ ಬೆಲೆಯು ರೂ.2,20,000/- ಎಂದು ಬರೆದಿದೆ ಎಂದರೆ ಸರಿ. 2,20,000/- ರೂ.ಗಳನ್ನು ಯಾವ ದಿನಾಂಕದಂದು ನಾನು ಕೊಟ್ಟಿದ್ದೇನೆ ನಿಡಿ 7 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಡಿ 7 ರಲ್ಲಿ ಬರೆದಿರುವಂತೆ 15,000/-ರೂ.ಗಳ ಚೆಕ್ಕು ವಾದಿಗೆ ಸಂದಾಯವಾಗಿದೆ ಎಂದು ತೋರಿಸಲು ಯಾವುದೇ ದಾಖಲು ಹಾಜರು ಪಡಿಸಿಲ್ಲ.

ನಿಡಿ 7 ರ ಆಧಾರದ ಮೇಲೆ ದಿಃ 24.10.2019 ರಂದು OS No.1067/2019 ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ಹೂಡುವ ವರೆಗೂ ನಿಡಿ 7 ರ ಬಗ್ಗೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ಈ ದಾವೆಯ ಪ್ರತಿವಾದ ಪತ್ರದಲ್ಲಿ ನಿಡಿ 7 ರ ಬಗ್ಗೆ ಬರೆದಿಲ್ಲ ಎಂದರೆ ಸರಿ. ವಾದಿಯ 20 ಗುಂಟೆಯನ್ನು ಕಬಳಿಸಲು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಎಂದಿಗೂ ಸಹ ಪವರ ಆಪ್ ಅಟಾರನಿ ನೀಡಿಲ್ಲ ಎಂದರೆ ಸರಿಯಲ್ಲ. ಸಾಲದ

ಸಲುವಾಗಿ ಭದ್ರತೆಗಾಗಿ ದಾಖಲೆಗಳನ್ನು ಮಾಡಬೇಕೆಂದು ಕರೆಸಿ ವಾದಿಯ ಸಹಿ ತೆಗೆದುಕೊಂಡು ನಿಡಿ 1 ಮತ್ತು 7 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**C/c.3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**